ಆರೋಗ್ಯ ಸಮಸ್ಯೆ

# ಅಮಾನಿ ಕೆರೆಯ ಬೆಂಕಿ ಕಂಡವರ ಕಣ್ಣಿಗೆ ಹಾನಿ!

## ■ ಗಾಳಿಯಲ್ಲಿ ಬಂದ ನೊರೆ ಬಿದ್ದ ಜಾಗ ಸುಟ್ಟು ಹೋಯ್ತು ■ ಗರ್ಭಿಣಿಯರಿಗೆ ಫ್ಲ್ಯಾಟ್ ಖಾಲಿ ಮಾಡಿಸಿದ ವೈದ್ಯರು

■ ವಿಜಯಕುಮಾರ್ ಚಂದರಗಿ

**ಬೆಂಗಳೂರು:** 1–ವರ್ತೂರಿನ ಕೆ.ಕೆ. ಹೈಸ್ಕೂಲ್ ಪ್ರಾಂಶುಪಾಲ ಎಂ.ಎ. ಖಾನ್ ಇದೇ ಬುಧವಾರ ಯಮಲೂರಿನ ಅಮಾನಿ ಕೆರೆಯಲ್ಲಿ ಹೊತ್ತಿದ ಬೆಂಕಿಯನ್ನು ನೋಡುತ್ತಾ ನಿಂತಿದ್ದರು. ಇದಾಗಿ ಕೆಲವೇ ಕ್ಷಣಗಳಲ್ಲಿ ಖಾನ್ ಅವರ ಎಡಗಣ್ಣಿನಲ್ಲಿ ಉರಿ ಕಾಣಿಸಿಕೊಂಡಿತು. ನಂತರ ಗೊತ್ತಾಯಿತು ಅವರ ದೃಷ್ಟಿ ಪಟಲದ ಮೇಲ್ಭಾಗದಲ್ಲಿ ಗುಳ್ಳೆಗಳಾಗಿ, ಅವು ಒಡೆದು ಸಮಸ್ಯೆಯಾಗಿದೆ.

2–ಗುಂಜೂರಿನ ಇಬ್ಬರು ಯುವಕರು ವರ್ತೂರು ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದರು. ಕೆರೆಯಿಂದ ಹಾರಿ ಬಂದ ನೊರೆ ಒಬ್ಬನ ಕೆನ್ನೆ ಮತ್ತೊಬ್ಬನ ಬಲಗೈ ಮೇಲೆ ಕುಂತಿತು. ಕೆಲ ಕ್ಷಣಗಳ ನಂತರ ಆ ನೊರೆ ಕುಳಿತ ಜಾಗದಲ್ಲಿ ಚರ್ಮ ಸುಟ್ಟಂತಾಗಿ, ಕಲೆ ಬಿದ್ದಿತ್ತು.

3–ನಿರಂತರವಾಗಿ ನೊರೆ ಹೊರಬರುತ್ತಿರುವ ಅಮಾನಿ ಕೆರೆಗೆ ಹೊಂದಿಕೊಂಡೇ ಇರುವ 'ವಿಸ್ತಾ ಲೊಗಾಸ್' ಅಪಾರ್ಟ್‌ಮೆಂಟ್‌ನ ಗರ್ಭಿಣಿಯರಿಬ್ಬರು ವೈದ್ಯರ ಸೂಚನೆ ಮೇರೆಗೆ ಸ್ವಂತ ಫ್ಲ್ಯಾಟ್‌ನ್ನು ಬಾಡಿಗೆ ಕೊಟ್ಟು, ಬಿಟಿಎಂ ಲೇಔಟ್‌ಗೆ ಶಿಫ್ಟ್ ಆಗಿದ್ದಾರೆ.

ಇವಷ್ಟೇ ಅಲ್ಲ, ವರ್ತೂರು ಮತ್ತು ಬೆಳ್ಳಂದೂರು ಬಳಿಯ ಯಮಲೂರಿನ ಅಮಾನಿ ಕೆರೆಗಳ ಸುತ್ತ ಒಂದು ಸುತ್ತು ಹಾಕಿದರೆ, ಇಂತಹ ಹತ್ತಾರು ಪ್ರಕರಣಗಳು ಬೆಳಕಿಗೆ ಬರುತ್ತವೆ. ನಗರದ ನಾನಾ ಭಾಗಗಳಿಂದ ಕೆರೆಗೆ ಬಂದು ಸೇರುವ ಕೊಳಚೆಯಿಂದ ಇದುವರೆಗೆ ಜಲ ಮಲೀನವಾಗಿತ್ತು. ಈಗ ಸೇವಿಸುವ ಗಾಳಿಯೂ ವಿಷಕಾರಿಯಾಗುತ್ತಿದೆ. ಈ ಎರಡು ಕೆರೆಗಳ ಸುತ್ತಲಿನ ಪ್ರದೇಶ ಈಗ ಮತ್ತೊಂದು ಮಾವಳ್ಳಿಪುರ ಹಾಗೂ ಮಂಡೂರು ಆಗುವ ಆತಂಕ ಅಲ್ಲಿನ ನಿವಾಸಿಗಳನ್ನು ಕಾಡುತ್ತಿದೆ.



ರಸ್ತೆ ತುಂಬಾ ಹಾರಾಡುತ್ತಿರುವ ನೊರೆ. ಚಿತ್ರ: ಕಾಸಿಫ್

**ಹಗಲು ನೊಣ, ರಾತ್ರಿ ಸೊಳ್ಳೆ:** ಬೆಳಗ್ಗೆಯಿಂದ ಸಂಜೆವರೆಗೆ ನೊಣಗಳು ಹಾಗೂ ಸಂಜೆಯಾಗುತ್ತಿದ್ದಂತೆ ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಜ್ವರ, ತಲೆನೋವು ಹೊಟ್ಟೆನೋವಿನಂತಹ ಕಾಯಿಲೆಗಳು ಸರ್ವೇಸಾಮಾನ್ಯವಾಗಿವೆ.



ಸೊಳ್ಳೆ ಪರದೆ, ಆಲ್ ಔಟ್, ಗುಡ್ ನೈಟ್‌ನಂತಹ ಅಸ್ತ್ರಗಳಿಂದ ಸೊಳ್ಳೆಗಳು ಬರದಂತೆ ತಡೆಯಬಹುದು. ಆದರೆ, ಕೆರೆಯಿಂದ ಬರುವ ದುರ್ವಾಸನೆ ನಿತ್ಯ ತಲೆನೋವು ತರುತ್ತಿದೆ. ಇದರಿಂದ ಬಚಾವಾಗುವುದೇ ಸಮಸ್ಯೆಯಾಗಿದೆ. ಅಪಾರ್ಟ್‌ಮೆಂಟ್‌ನಲ್ಲಿರುವ ಹಲವಾರು ಜನರಿಗೆ ಒಂದಿಲ್ಲೊಂದು ಆರೋಗ್ಯದ ಸಮಸ್ಯೆಗಳು ಕಂಡುಬರುತ್ತಲೇ ಇವೆ ಎಂದು ವಿಸ್ತಾ ಲೊಗಾಸ್ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಉಪಾಧ್ಯಕ್ಷ ಅಭಿನಂದನ್ ಅಲವತ್ತುಕೊಳ್ಳುತ್ತಾರೆ.

**ಬಿಟ್ಟೂಹೋಗುವಂತಿಲ್ಲ:** 'ತಿಂಗಳಲ್ಲಿ ಎರಡು ಬಾರಿ ಆಸ್ಪತ್ರೆಗೆ ಭೇಟಿ ಕೊಡಬೇಕಾದ ಅನಿವಾರ್ಯತೆ ಇದೆ. ಅದರಲ್ಲೂ ಮಕ್ಕಳಿಗೆ ಜ್ವರ ಸಾಮಾನ್ಯವಾಗಿಬಿಟ್ಟಿದೆ. ಮನೆ ತೊರೆದು ಹೋಗಬೇಕೆಂದರೆ, ಸ್ವಂತ ಮನೆ ಕಟ್ಟಿದ್ದೇವೆ. ದಿಕ್ಕುತೋಚದಂತಾಗಿದೆ' ಎಂದು ಅಮಾನಿ ಕೆರೆ ಬಳಿಯ ನಿವಾಸಿ ಹನುಮಂತಯ್ಯ ಅಸಹಾಯಕತೆ ತೋಡಿಕೊಳ್ಳುತ್ತಾರೆ.

ನಾನು ಹುಟ್ಟಿದಾಗಿನಿಂದಲೂ ಇಲ್ಲಿಯೇ ಇದ್ದೇನೆ. ಈ ಹಿಂದೆ ಯಾವತ್ತೂ ಇಷ್ಟೊಂದು ಸಮಸ್ಯೆಯಾಗಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ವಾಸನೆ ವಿಪರೀತವಾಗಿದೆ. ಇದರಿಂದ ಒಂದೊಂದೇ ಆರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಆಗಷ್ಟೇ ಸ್ನಾನ ಮಾಡಿ



## ಕೆರೆ ವರಿ

ಬಂದರೂ ಮೈ ಅಂಟು ಅಂಟಾಗಿರುತ್ತದೆ. ವಾಸನೆಗೆ ಊಟ ಕೂಡ ಹೋಗುವುದಿಲ್ಲ ಎನ್ನುತ್ತಾರೆ ಬೆಳ್ಳಂದೂರಿನ ಮುನಿರೆಡ್ಡಿ.

ಬುಧವಾರವಷ್ಟೇ ಸ್ನೇಹಿತರು ಕರೆದಿದ್ದರಿಂದ ಅಮಾನಿ ಕೆರೆಯಲ್ಲಿನ ಬೆಂಕಿ ವೀಕ್ಷಿಸಲು ತೆರಳಿದ್ದೆ. ಆ ದೃಶ್ಯವನ್ನುಮೊಬೈಲ್‌ನಲ್ಲಿಸೆರೆಹಿಡಿಯುವಾಗ, ಬೆಂಕಿಯಿಂದ ಹೊರಬರುವ ಹೊಗೆ ನನ್ನ ಎಡಗಣ್ಣಿಗೆ ರಾಚಿದೆ. ಇದರಿಂದ ತುಂಬಾ ಉರಿ ಶುರುವಾಯಿತು. ನಂತರ ಮನೆಗೆ ಬಂದು ನೋಡಿದಾಗ ಕೆಂಪಾಗಿತ್ತು. ಕಾರ್ತಿಕ್ ನೇತ್ರಾಲಯದಲ್ಲಿ ತಪಾಸಣೆ ಮಾಡಿಸಿದೆ. ಕಾರ್ನಿಯಾದ ಮೇಲೆ ಗುಳ್ಳೆಗಳು ಎದ್ದು, ಒಡೆದಿವೆ. ಆದರೆ, ಇದು ಬ್ಯಾಕ್ಟೀರಿಯಾ ಅಥವಾ ಫಂಗಸ್‌ನಿಂದ ಇನ್‌ಫೆಕ್ಷನ್ ಆಗಿದೆಯೋ ಸ್ವತಃ ವೈದ್ಯರಿಗೂ ಗೊತ್ತಾಗುತ್ತಿಲ್ಲ. ಹಾಗಾಗಿ, ಐದು ಪ್ರಕಾರದ ಔಷಧ ಬರೆದಿದ್ದಾರೆ.ಎಂದು ತಾಕೀತು ಮಾಡಿದ್ದಾರೆ ಎಂದು ಎಂ.ಎ. ಖಾನ್ ವಿವರಿಸಿದರು.

**ವಿಜ್ಞಾನಿಗಳಲ್ಲೂ ಆರೋಗ್ಯ ಸಮಸ್ಯೆ:** ಈ ಬಗ್ಗೆ ಐಐಎಸ್‌ಸಿ ಪರಿಸರ ವಿಜ್ಞಾನಿಗಳ ಕೇಂದ್ರದ ವಿಜ್ಞಾನಿ ಹಾಗೂ ಕೆರೆಗಳ ತಜ್ಞ ಡಾ.ಟಿ.ವಿ. ರಾಮಚಂದ್ರ ಅವರನ್ನು ಗಮನಸೆಳೆದಾಗ, 'ಅಯ್ಯೋ ಬೆಂಕಿ ಕಾಣಿಸಿಕೊಂಡಿದೆ ಎಂದ ತಕ್ಷಣ ನಮ್ಮ ತಂಡ ಸ್ಥಳಕ್ಕೆ ಭೇಟಿ ನೀಡಿತ್ತು. ಒಬ್ಬರಿಗೆ ತಲೆನೋವು, ಮತ್ತೊಬ್ಬರಿಗೆ ಅಜೀರ್ಣತೆ, ಕಣ್ಣು ಉರಿತ ಮತ್ತಿತರ ಸಮಸ್ಯೆಗಳು ಕಾಣಿಸಿಕೊಂಡಿವೆ' ಎಂದು ಹೇಳಿದರು.

## ಸೊಳ್ಳೆ ಓಡಿಸಲಿಕ್ಕೇ 30 ಸಾವಿರ ರೂ. ವೆಚ್ಚ

**ಸೊ**ಳ್ಳೆ ಓಡಿಸಲಿಕ್ಕಾಗಿಯೇ ವರ್ತೂರು ಕೆರೆ ಸುತ್ತಲಿನ ಜನ ವರ್ಷಕ್ಕೆ 30 ಸಾವಿರ ರೂ. ಖರ್ಚು ಮಾಡುತ್ತಿದ್ದಾರೆ. ನಂಬಿದ್ರೆ ನಂಬಿ ಬಿಟ್ರೆ ಬಿಡಿ, ಇದನ್ನು ಸ್ವತಃ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಗಳ ಕೇಂದ್ರದ ವಿಜ್ಞಾನಿಗಳ ತಂಡವು ಸ್ಥಳೀಯ ವಿದ್ಯಾರ್ಥಿಗಳ ಸಹಯೋಗದಲ್ಲಿ ಮಾಡಿದ ಸಮೀಕ್ಷೆಯಿಂದ ಇದು ಬಹಿರಂಗಗೊಂಡಿದೆ. ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಸಂಶೋಧನಾ ಪ್ರಬಂಧಗಳಲ್ಲಿ ಇದನ್ನು ಕಾಣಬಹುದು. ವರ್ತೂರು ಕೆರೆ ಸುತ್ತ ವಾಸಿಸುವ 100ರಿಂದ 150 ಕುಟುಂಬಗಳಲ್ಲಿ ಜ್ವರ, ಭೇದಿ, ಚರ್ಮದ ಕಾಯಿಲೆಗಳು ಕಂಡುಬರುತ್ತಿವೆ. ಅದರಲ್ಲೂ ಸೊಳ್ಳೆ ಕಡಿತದಿಂದ ಸಾಕಷ್ಟು ಆರೋಗ್ಯದ ಸಮಸ್ಯೆಗಳು ಕಾಣಿಸುತ್ತಿವೆ. ಈ ಸೊಳ್ಳೆಗಳಿಂದ ತಪ್ಪಿಸಿಕೊಳ್ಳಲು ನಿವಾರಕಗಳ (ಆಲ್‌ಔಟ್, ಗುಡ್‌ನೈಟ್ ಇತ್ಯಾದಿ) ಖರೀದಿಗಾಗಿ ಒಟ್ಟಾರೆ 30 ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

## ಶವಸಂಸ್ಕಾರಕ್ಕೂ ಅಡ್ಡಿಯಾದ ನೊರೆ

**ಕೆ**ರೆಯಿಂದ ಹಾರಿಬರುವ ನೊರೆಯಿಂದಾಗುವ ಅಪವಿತ್ರವನ್ನು ತಪ್ಪಿಸಲು ಪಾರ್ಥಿವ ಶರೀರವನ್ನು ವಾಹನವೊಂದರಲ್ಲಿ ಸಾಗಿಸಿದ ಪ್ರಸಂಗ ಈಚೆಗೆ ಬೆಳ್ಳಂದೂರಿನ ಅಮಾನಿ ಕೆರೆ ಬಳಿ ನಡೆದಿದೆ. ಕಾಸಿಂ ಎಂಬುವರ ತಾಯಿ ನಿಧನರಾಗಿದ್ದರು. ಅವರ ಪಾರ್ಥಿವ ಶರೀರವನ್ನು ನೊರೆಯಿಂದ ತುಂಬಿರುವ ಸೇತುವೆ ಆಚೆಗಿನ ಖಬರಸ್ತಾನ್‌ಗೆ ತೆಗೆದುಕೊಂಡು ಹೋಗುವುದೇ ಸಮಸ್ಯೆಯಾಯಿತು. ಈ ಹಿನ್ನೆಲೆಯಲ್ಲಿ ಮನೆಯಿಂದ ಐದಾರು ಹೆಜ್ಜೆ ಹೊತ್ತುಕೊಂಡು ಹೋಗಿ, ನಂತರ ವಾಹನದಲ್ಲಿ ಸಾಗಿಸಲಾಯಿತು. ಸೇತುವೆ ದಾಟಿದ ಬಳಿಕ ಮತ್ತೆ ಹೊತ್ತೊಯ್ಯಲಾಯಿತು ಎಂದು ಕಾಸಿಂ ಸ್ನೇಹಿತ ದಾವಲ್‌ಸಾಬ್ ವಿವರಿಸಿದರು. ಅಷ್ಟೇ ಯಾಕೆ, ಪ್ರಾರ್ಥನೆಗೆ ತೆರಳಲೂ ಹರಸಾಹಸ ಮಾಡಬೇಕಾಗಿದೆ. ಸ್ನಾನ ಮಾಡಿ, ಪ್ರಾರ್ಥನೆಗೆ ತೆರಳುವಾಗ ಈ ನೊರೆ ಬಂದು ಅಂಟುವುದರಿಂದ ಮೈಲಿಗೆ ಆಗಿಬಿಡುತ್ತೇವೆ. ಆರೋಗ್ಯದ ಸಮಸ್ಯೆ ಒತ್ತಟ್ಟಿಗಿರಲಿ, ಮಸೀದಿಗೆ ತೆರಳುವುದೇ ಸಮಸ್ಯೆಯಾಗಿದೆ' ಎಂದು ದಾವಲ್‌ಸಾಬ್ ತಿಳಿಸಿದರು.